ನಗರಸಭೆಯಲ್ಲಿ ಇಲ್ಲೀಗಲ್ ಆಗಿ ವ್ಯವಹಾರಗಳು ನಡೆದಿದೆ, ಆಮೇಲೆ ನೋಟಿಫಿಕೇಷನ್ ಆಗಿ ಅದನ್ನು ಬಿಟ್ಟು ಕೊಟ್ಟಿದ್ದಾರೆ, ಮಿಸ್ ಅಪ್ರೊಪ್ರಿಯೇಷನ್ ಆಗಿದೆ, ಯಾರೋ ಎಕ್ಸೈಜ್ ಕಂಟ್ರಾಕ್ಟರ್ ಹಿಂದೆ ನಿಂತುಕೊಂಡು ಇದನ್ನೆಲ್ಲ ಮಾಡಿಸುತ್ತಿದ್ದಾರೆ, ಸೀಲು ವೆಗೈರೆ ಎಲ್ಲಾ ಅವರ ಮನೆಯಲ್ಲಿದೆ ಎಂದು ಹೇಳಿದರು. ಸಂಬಂಧಪಟ್ಟ ಜಾಯಿಂಟ್ ಡೈರೆಕ್ಟರ್‌ನ್ನು ನಾನು ಇವತ್ತೇ ಕಳುಹಿಸಿಬಿಟ್ಟು ಅದರ ಬಗ್ಗೆ ರಿಪೋರ್ಟ್ ತರಿಸುತ್ತೇನೆ. ನಾನು ಬಂದ ಮೇಲೆ ಬಹಳ ಮುನಿಸಿಪಾಲಿಟಿಗಳ ಮೇಲಿರುವ ಅಲಿಗೇಶನ್ಸ್ ರೆಡಿ ಮಾಡುತ್ತಿದ್ದೇನೆ. ಯಾವ ಯಾವ ಮುನಿಸಿಪಾಲಿಟಿಗಳ ಮೇಲೆ ಅಲಿಗೇಶನ್ಸ್ ಬಂದಿವೆಯೋ ನಿರ್ದಾಕ್ಷಿಣ್ಯವಾಗಿ ಕಳುಹಿಸಿದ್ದೇವೆ. ಇವತ್ತು ನಾವು ಬಹಳ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡುವುದಕ್ಕೂ ತಯಾರಾಗಿದ್ದೇವೆ.

ಇನ್ನು ಕೆಲವೇ ದಿನಗಳಲ್ಲಿ ಅವರ ಮೇಲೆ ಕಾನೂನು ಪ್ರಕಾರ ಏನು ಅವಕಾಶ ಬರುತ್ತೋ ಆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ. ಜೊತೆಗೆ ನಾನು ಡೆಪ್ಯುಟಿ ಕಮೀಷನರ್ ಹತ್ತಿರ ಫೋನ್ ಮುಖಾಂತರ ಮಾತನಾಡುತ್ತೇನೆ. ಇವತ್ತು ನಾನು ನಮ್ಮ ಸಂಬಂಧಪಟ್ಟ ಆಫೀಸರನ್ನು ಅಲಿಗೇಶನ್ಸ್ ಬಗ್ಗೆ ತನಿಖೆಗಾಗಿ ಕಳುಹಿಸಿ ಕೊಡುತ್ತಿದ್ದೇನೆ. ನಮ್ಮ ಚೀಫ್ ವಿಪ್‌ರವರು ಹೇಳಿದಂತೆ ಈಗಾಗಲೇ ಸಂಬಂಧಪಟ್ಟ ಆಫೀಸರನ್ನು ಕಳುಹಿಸಿದ್ದೇವೆ. ಎನ್‌ಕ್ವೈರಿ ಆಗಿದೆ, ಇನ್ನು ಎರಡು-ಮೂರು ದಿವಸಗಳಲ್ಲಿ ರಿಪೋರ್ಟ್ ಬರುತ್ತದೆ. ನನಗೆ ಅವರು ತಿಳಿಸಿದ ತಕ್ಷಣ ನಾನು ಕ್ರಮ ತೆಗೆದುಕೊಂಡಿದ್ದೇನೆ. ಹಾಸನದ ಬಗ್ಗೆ ಕೂಡ ನಾನು ಕ್ರಮ ತೆಗೆದುಕೊಂಡಿದ್ದೇನೆ. ಅಲಿಗೇಶನ್ಸ್ ಎಲ್ಲಾ ಬಂದಿದೆ. ಸೂಪರ್‌ಸೀಡ್ ಮಾಡಬೇಕಾದರೆ ಅಲಿಗೇಶನ್ಸ್ ಬಗ್ಗೆ ಎನ್‌ಕ್ವೈರಿ ಆಗಬೇಕು, ಅವರಿಗೆ ಅವಕಾಶ ಕೊಡಬೇಕು. ಇಷ್ಟು ದಿವಸ ಟೈಮ್ ತೆಗೆದುಕೊಂಡ ಮೇಲೆ ನಾವು ಅದರ ಪ್ರಕಾರ ಮಾಡಬೇಕು. ಅವರಿಗೆ ಎಲ್ಲಾ ಗೊತ್ತಿದೆ. ನಾವು ಯಾವುದಕ್ಕೂ ಹಿಂಜರಿಯುತ್ತಿಲ್ಲ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ರೆಡಿ ಇದ್ದೇವೆ. ನಾನು ಡೆಪ್ಯುಟಿ ಕಮೀಷನರ್ ಜೊತೆ ಫೋನ್ ಮುಖಾಂತರ ಮಾಡುತ್ತೇನೆ. ನಮ್ಮ ಡಿ.ಎಂ.ಎ. ಆಫೀಸ್‌ನಿಂದ,ಜವಾಬ್ದಾರಿಯುತವಾದ ಅಧಿಕಾರಿಯನ್ನು ನಾನು ಇವತ್ತೇ ಕಳುಹಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ರೆಕಾರ್ಡ್ ಸೀಜ್ ಮಾಡಿಸಿ. ಆಮೇಲೆ ಎನ್‌ಕ್ವೈರಿ ಮಾಡಿ.

ಶ್ರೀ ಚೌಡರೆಡ್ಡಿ:– ನಾನು ಮಾತನಾಡುತ್ತೇನೆ, ನಮ್ಮ ಆಫೀಸಿನಿಂದ ನಾನು ಇವತ್ತೇ ಅಲ್ಲಿಗೆ ಕಳುಹಿಸುತ್ತೇನೆ.

3. ಮಂಡ್ಯ ನಗರದಲ್ಲಿರತಕ್ಕ ಮೈಸೂರು ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಹಣೆ ಬಗ್ಗೆ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಅಧ್ಯಕ್ಷರೇ, ನಮ್ಮ ಮಂಡ್ಯ ನಗರದಲ್ಲಿರತಕ್ಕಂಥ ಮೈಸೂರು ಸಕ್ಕರೆ ಕಾರ್ಖಾನೆಯ ವಾರ್ಷಿಕ ಸಭೆ ದಿನಾಂಕ 20–3–93ರಲ್ಲಿ ಮಂಡ್ಯದಲ್ಲಿ ನಡೆಯುತ್ತಿದೆ. ಮೈಸೂರು ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ರೈತರು ನಾವು ಉತ್ತಮ ಗುಣಮಟ್ಟದ ಕಬ್ಬನ್ನು ಬೆಳೆದುಕೊಟ್ಟಿದ್ದರೂ ಸಹ ಸಕ್ಕರೆ ಕಾರ್ಖಾನೆ ದಕ್ಷವಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದೆ ನಮಗೆ ಕೊಡತಕ್ಕಂಥ ಬೆಲೆಯಲ್ಲಿ ತೀರಾ ಅನ್ಯಾಯವಾಗಿದೆ ಎಂದು ಹೇಳಿ ವಾರ್ಷಿಕ ಮಹಾಸಭೆಯಲ್ಲಿ ರೈತರು ಇತರ ರೈತ ಸಂಘಟಕರೆಲ್ಲ ಪ್ರತಿಭಟನೆ ಮಾಡತಕ್ಕಂಥ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಾ ಈ ಒಂದು ಸಕ್ಕರೆ ಕಾರ್ಖಾನೆಯಲ್ಲಿ 91–92ನೇ ಸಾಲಿನಲ್ಲಿ ಕೂಡ ಅನೇಕ ಸ್ಟಾಕ್ ಉಳಿದಿದೆ. 1992–93ನೇ ಸಾಲಿನಲ್ಲೂ ಕೂಡ ಸಕ್ಕರೆ ಸ್ಟಾಕ್ ಉಳಿದಿದ್ದು ಇತ್ತೀಚೆಗೆ ಕೇಂದ್ರ ಸರ್ಕಾರದ ನೀತಿಯಿಂದ ಸಕ್ಕರೆಯ ಮುಕ್ತಮಾರುಕಟ್ಟೆ ದರ ಹಾಗೂ

ಲೆವಿ ದರ ಹೆಚ್ಚಾಗಿದ್ದು ನಮ್ಮ ರೈತರಿಗೆ ಆ ಸೌಲಭ್ಯವನ್ನು, ದರವನ್ನು ಸರ್ಕಾರ ಮಧ್ಯೆ ಪ್ರವೇಶಿಸಿ ದೊರಕಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೇ, ಈ ವಿಷಯ ಸರ್ಕಾರದ ಗಮನಕ್ಕೆ ಬಂದ ಮೇಲೆ ನನ್ನ ಕೊಠಡಿಯಲ್ಲಿ ಶ್ರೀಮಾನ್ ಆತ್ಮಾನಂದರವರನ್ನು ಮತ್ತು ಶ್ರೀ ಹೆಚ್.ಡಿ. ಚೌಡಯ್ಯನವರನ್ನೂ ಸಮಕ್ಷಮ ಕರೆಸಿ ಶುಗರ್ ಫ್ಯಾಕ್ಟರಿ ಸಿ.ಎಂ.ಡಿ. ಯವರನ್ನು ಕರೆಸಿ ಅರ್ಧ ಗಂಟೆ ಸವಿಸ್ತಾರವಾಗಿ ಚರ್ಚೆ ಆದ ನಂತರ ಅವರಿಗೆ ತೃಪ್ತಿಯಾದ ಮೇಲೆ ನಾನು ಸಭೆಯನ್ನು ಮುಗಿಸಿ ಬಂದಿದ್ದೇನೆ. ಆದರೆ ಇವತ್ತು ಅವರು ಏಕೆ ಆ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಆವತ್ತಿನ ದಿವಸ ಅವರ ಎಲ್ಲಾ ಸಮಸ್ಯೆಗಳ ಬಗ್ಗೆ ಒಪ್ಪಿಕೊಂಡು ಸಿ.ಎಂ.ಡಿ.ಯವರು ಆಶ್ವಾಸನೆ ಕೊಟ್ಟರು. 20ನೇ ತಾರೀಖು ಏನು ಜನರಲ್ ಬಾಡಿ ಮೀಟಿಂಗ್ ಆಗುತ್ತದೆ ಆ ದಿವಸ ಯಾವ ತರಹದ ಆಹಿತಕರ ಘಟನೆ ಜರುಗದಂತೆ ನೋಡಿಕೊಳ್ಳುವುದಾಗಿ ಅವರ ಸಮಕ್ಷಮದಲ್ಲಿ ಹೇಳಿದ್ದಾರೆ. ಆದರೂ ಅವರಿಗೆ ಏಕಕ್ಕೋ ಸಂಶಯವೆಂದು ನನಗೆ ಅರ್ಥವಾಗುತ್ತಿಲ್ಲ.

4. ಬಾಂಬೆ ಮತ್ತು ಕಲ್ಕತ್ತದಲ್ಲಿ ನಡೆದಂಥ ಬಾಂಬ್ ಪ್ರಕರಣದ ಹಿನ್ನೆಲೆಯಲ್ಲಿ ನಗರದಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೇ, ನಿನ್ನೆ ವಿಧಾನ ಪರಿಷತ್ತಿನಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟು ರಾಜ್ಯದಲ್ಲಿರತಕ್ಕಂಥ ಕಾನೂನು ಪರಿಸ್ಥಿತಿಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಜೊತೆಗೆ ಬಾಂಬೆಯಲ್ಲಿ ಮತ್ತು ಕಲ್ಕತ್ತದಲ್ಲಿ ನಡೆದಿರತಕ್ಕಂಥ ಬಾಂಬ್ ಪ್ರಕರಣದ ಹಿಂದಗಡೆ ರಾಜ್ಯದಲ್ಲಿ ತೆಗೆದುಕೊಂಡಿರತಕ್ಕಂತ ಕಾರ್ಯಕ್ರಮಗಳು ಮತ್ತು ಅಂತಹ ಗುಂಪುಗಳು ಏನಾದರೂ ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಕಂಡಲ್ಲಿ ಗುಂಡು ಹಾಕತಕ್ಕಂಥ ಆದೇಶವನ್ನು ಕೊಟ್ಟಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇವತ್ತಿನ ದಿವಸ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮುಖಪುಟದಲ್ಲಿ ಮುಖ್ಯವಾಗಿರತಕ್ಕಂಥ ಸುದ್ದಿ ಪ್ರಕಟಣವಾಗಿದೆ. ಮುಂಬೈ ಘಟನೆ ಆದ ನಂತರ ಮಧ್ಯಪ್ರದೇಶಕ್ಕೆ, ಗುಜರಾತಿಗೆ ಮತ್ತು ಕರ್ನಾಟಕ ರಾಜ್ಯಕ್ಕೆ ಆಸ್ಫೋಟಕಗಳನ್ನು ಒಳಗೊಂಡ ಬಾಂಬ್‌ಗಳಿರತಕ್ಕ ಕನ್‌ಸೈನ್‌ಮೆಂಟ್ ಬೆಂಗಳೂರಿಗೆ ತಲುಪಿದೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ. ಎರಡನೆಯದಾಗಿ ಇದರ ಬಗ್ಗೆ ತೆಗೆದುಕೊಂಡಿರತಕ್ಕಂಥ ಕ್ರಮಗಳು ಕೆಲವು ಸೂಕ್ಷ್ಮ ವಿಚಾರಗಳು ಏನು ಇರುತ್ತವೆ ಅದರ ಬಗ್ಗೆ ಸದನಕ್ಕೆ ಬಹಿರಂಗವಾಗಿ ಸರ್ಕಾರಕ್ಕೆ ಹೇಳುವುದಕ್ಕಾಗುವುದಿಲ್ಲ. ಅದು ಕಾನೂನು ಹಿತದೃಷ್ಟಿಯಿಂದ ಹೇಳತಕ್ಕಂಥ ಅವಶ್ಯಕತೆಯೂ ಇಲ್ಲವೆಂದು ನಾನು ತಿಳಿದುಕೊಂಡಿರತಕ್ಕವನು.

ಆದರೆ, ಮುಖ್ಯ ಮಂತ್ರಿಯವರು ಸವಿಸ್ತಾರವಾಗಿ ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ವಿಶೇಷವಾಗಿ ಇವತ್ತು ಎಕ್ಸ್‌ಪ್ಲೋಸಿವ್ಸ್ ಕರ್ನಾಟಕಕ್ಕೆ ಸಹಿತ ಬಂದಿವೆ. ಇದರ ಬಗ್ಗೆ ಎರೋಪ್ಲೇನ್‌ಗಳಲ್ಲಿ ಬರತಕ್ಕಂಥವರನ್ನು, ಟ್ರೈನ್‌ನಲ್ಲಿ ಬರತಕ್ಕಂಥವರನ್ನು ಚೆಕ್ ಮಾಡುತ್ತೇವೆ ಮತ್ತು ಸಸ್ಪೆಕ್ಟೆಡ್ ಎಲಿಮೆಂಟ್ಸ್‌ನ್ನು ಅರೆಸ್ಟ್ ಮಾಡುತ್ತೇವೆಂದು ಏನು ಹೇಳಿದ್ದಾರೆ ಇವರ ಬಗ್ಗೆಯೂ ಸಹಿತ ಈ ಸದನಕ್ಕೆ ತಿಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಜೊತೆಗೆ ಈ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರಿದ್ದಾರೆ; ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಕಾವೇರಿ ಗಲಾಟೆಯಾದ ಸಂದರ್ಭದಲ್ಲಿ ಎರಡು ದಿನ ಮುಂಚಿತವಾಗಿ ಆಂಟಿ ಸೋಷಿಯಲ್ ಎಲಿಮೆಂಟ್ಸ್‌ನ್ನು ಅರೆಸ್ಟ್ ಮಾಡಿದ್ದಿದ್ದರೆ ಅಂಥಾ ಘಟನೆಗಳೇ ನಡೆಯುತ್ತಿರಲಿಲ್ಲ. ಆದರಿಂದಾಗಿ ಇವತ್ತು ಆ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆಯೇ ಎನ್ನುವುದು ನಮಗೆಲ್ಲಾ ತಿಳಿಯಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು